ಏರ್ಪಡಿಸಿ ಎಂದು ಕೇಳಿದ್ದೆ. ಆದರೆ ಮಲ್ಲೇಶ್ವರಂನಲ್ಲಿ ಮಾಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ಎಲ್ಲಾ ಭಾಗಗಳಲ್ಲೂ ವಸ್ತು ಪ್ರದರ್ಶನವನ್ನು ಮಾಡಿ ಎಂದು ನಾನು ಕೇಳುತ್ತಿದ್ದೇನೆ. :ಜಯನಗರ, ಇಂದಿರಾನಗರ ಹಾಗೂ ಎಲ್ಲೆಲ್ಲಿ ಹೆಚ್ಚಿನ ಜನಸಂದಣಿ ಇದೆಯೋ ಅಂತಹ ಕಡೆ ವಸ್ತುಪ್ರದರ್ಶನವನ್ನು ಮಾಡಬೇಕು. ಹಾಗೂ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲೂ ಇಂತಹ ವಸ್ತು ಪ್ರದರ್ಶನವನ್ನು ಮಾಡಿ ಎಂಬುದು ನನ್ನ ಸಲಹೆ. ನಾನು ರಿಯಾಯಿತಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ ಅದಕ್ಕೆ ತಾವು ಉತ್ತರವನ್ನು ಕೊಟ್ಟಿರುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಲಿಂಗಾರೆಡ್ಡಿಯವರು ಕೊಟ್ಟಿರುವಂತಹ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಖಾದಿ ಬಟ್ಟೆಯಿಂದ ತಯಾರಾಗುವಂತಹ ವಸ್ತುಗಳು ಜನರಲ್ಲಿ ಹೆಚ್ಚಿನ ಪಾಪ್ಯುಲಾರಿಟಿ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡು ನಾವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಈಗಾಗಲೇ ಅವರಿಗೆ ಒದಗಿಸಲಾಗಿರುವ ಉತ್ತರದ ಪ್ರಕಾರವಾಗಿ ಬೆಂಗಳೂರು ನಗರದಲ್ಲಿ ಸುಮಾರು 27ಕೇಂದ್ರಗಳನ್ನು ತೆರೆದು ಆ ಕೇಂದ್ರಗಳ ಮುಖಾಂತರವಾಗಿ ಖಾದಿ ಬಟ್ಟೆಗಳನ್ನು ವಿತರಿಸಲಿಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಖಾದಿ ಬಟ್ಟೆಯ ಬಗ್ಗೆ ಒಂದು ಮಾತನ್ನು ಮಾನ್ಯ ಶಾಸಕರಿಗೆಲ್ಲಾ ಹೇಳಲಿಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ಆರೋಗ್ಯದ ದೃಷ್ಟಿಯಿಂದ ಖಾದಿ ಬಟ್ಟೆಯನ್ನು ಧರಿಸುವುದು ಒಂದು ಉತ್ತಮವಾದಂಥದ್ದು. ಬೇರೆ ಬೇರೆ ಪ್ರದೇಶಗಳಲ್ಲೂ ಕೂಡ ಈ ಖಾದಿ ಬಟ್ಟೆಗೆ ಬಹಳಷ್ಟು ಡಿಮ್ಯಾಂಡ್ ಇದೆ. ನಮ್ಮ ಸರ್ಕಾರದವರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಎಲ್ಲಾ ಕಡೆಯಲ್ಲೂ 27ಪ್ರದೇಶಗಳಲ್ಲಿಯೂ ಕೂಡ ಖಾದಿ ಮಾರಾಟ ಕೇಂದ್ರವನ್ನು ಸ್ಥಾಪಿಸಿಕೊಂಡು, ಅದರ ಮುಖಾಂತರವಾಗಿ ಖಾದಿ ಬಟ್ಟೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಧರಿಸಲಿಕ್ಕೆ, ಮತ್ತು ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಆಕರ್ಷಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದಲ್ಲದೆ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ 4ಖಾದಿ ಭಂಡಾರ ಅಂಗಡಿಯನ್ನು ತೆರೆದು ಖಾದಿ ಬಟ್ಟೆಯನ್ನು ಜನಪ್ರಿಯತೆಗೊಳಿಸಲು ಹೆಚ್ಚಿನ ಕ್ರಮವನ್ನು ತೆಗೆದುಕೊಂಡಿದ್ದೇವೆ. ಜನರಿಗೆ ಕಡಿಮೆ ದರದಲ್ಲಿ ಖಾದಿಬಟ್ಟೆಗಳು ಸಿಗುತ್ತಿದೆ. ನಾನು ಈ ಸಂದರ್ಭದಲ್ಲಿ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮುಖ್ಯವಾಗಿ ಖಾದಿ ಬಟ್ಟೆಯನ್ನು ಧರಿಸುವುದರಿಂದ, ಆರೋಗ್ಯದ ದೃಷ್ಟಿಯಿಂದಲೂ ಮತ್ತು ನಮ್ಮ ರಾಜ್ಯದ ಗುಡಿ ಕೈಗಾರಿಕೆಯ ದೃಷ್ಟಿಯಿಂದಲೂ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಂತೆ ಆಗುತ್ತದೆ. ಎಲ್ಲಾ ಜನರು ಕೂಡ ಖಾದಿ ಬಟ್ಟೆಯನ್ನು ಧರಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂಬ ಬಗ್ಗೆ ಒಂದು ಆಹ್ವಾನವನ್ನು ನಮ್ಮ ಇಲಾಖೆಯ ಪರವಾಗಿ ಮಾಡಲಿಕ್ಕೆ ನಾನು ಬಯಸುತ್ತಿದ್ದೇನೆ.

ಶಾಸಕರು ಹೇಳಿದ ಪ್ರಕಾರವಾಗಿ ನಗರದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಇತ್ತೀಚಿಗೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಅತಿ ಉತ್ತಮವಾದಂತಹ ವಸ್ತು ಪ್ರದರ್ಶನವನ್ನು ಮಾಡಿದೆವು. ವಸ್ತುಪ್ರದರ್ಶನವು ಬಹಳ ಚೆನ್ನಾಗಿ ನಡೆಯಿತು. ಈ ವಸ್ತು ಪ್ರದರ್ಶನಕ್ಕೆ ಬೇರೆಬೇರೆ ರಾಜ್ಯಗಳಿಂದ ಜನರು ಬಂದು ಭಾಗವಹಿಸಿದ್ದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗದಿಂದ ತಯಾರಾಗುವಂತಹ ಸರಕುಗಳಾಗಲಿ, ವಸ್ತುಗಳಾಗಲಿ, ಬಟ್ಟೆಗಳಾಗಲಿ, ಹೊರಗಡೆಯಿಂದ ಜನರನ್ನು ಆಕರ್ಷಿಸುವಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ತಾವು ಸಬ್ಸಿಡಿಯ

ಬಗ್ಗೆ ಹೇಳಿದ್ದೀರಿ. ನಾವು ಎಲ್ಲಾ ಕಡೆಯಲ್ಲೂ ಸಬ್ಸಿಡಿಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. 25ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಹಳ್ಳಿಗಳಲ್ಲಿ ಸ್ಥಾಪನೆಯಾದಂತಹ ಗುಡಿಕೈಗಾರಿಕೆಗಳಿಗೆ 25-30 ಪರ್ಸೆಂಟ್ ಸಬ್ಸಿಡಿಯನ್ನು, ಮಹಿಳೆಯರು ಮುಂದೆ ಬರುವಂತಹವರಿಗೆ 60ಪರ್ಸೆಂಟ್ ಸಬ್ಸಿಡಿಯನ್ನು ಕೊಡಲಿಕ್ಕೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಒಟ್ಟಿನಲ್ಲಿ ನಾವು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ರೂಪಿಸಲಿಕ್ಕೆ ಸರ್ಕಾರದವರು ಎಲ್ಲಾ ತರಹದ ಸಹಾಯವನ್ನು ಕೊಡಲಿಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಚಂದ್ರಕಾಂತ್ ಬಿ ಬೆಲ್ಲದ್ :- ಸರ್ಕಾರದವರು ಖಾದಿ ಬಟ್ಟೆಯ ಮೇಲೆ ರಿಬೇಟ್ ಕೊಡುವುದು ಬಾಕಿ ಇದೆಯಲ್ಲಾ, ಅದನ್ನು ಎಷ್ಟು ದಿವಸಗಳಲ್ಲಿ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಿಸುತ್ತೀರಿ ಎಂಬ ಬಗ್ಗೆ : ತಾವು ಹೇಳಬೇಕು.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ :- ನಮ್ಮ ರಾಜ್ಯದಲ್ಲಿ ಸ್ವಾತಂತ್ರ ಸ್ವರ್ಣಜಯಂತಿಯ ನಿಮಿತ್ತವಾಗಿ ಸರ್ಕಾರದವರು ವಿಶಿಷ್ಟವಾದಂತಹ ಕಾರ್ಯಕ್ರಮವನ್ನು ರೂಪಿಸಿಕೊಂಡು ನಾವು ಎಲ್ಲಿ ರಿಬೇಟ್ ಕೊಡುವಂತಹ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡಿದ್ದೆವು. ಈ ಸಂದರ್ಭದಲ್ಲಿ ಸುಮಾರು 61/2 ಕೋಟಿ ರೂಗಳಷ್ಟು ಮಂಜೂರಾದಂತಹ ಹಣದಲ್ಲಿ ಸುಮಾರು 4ಕೋಟಿ ರೂಪಾಯಿಗಳನ್ನು ಈ ವರ್ಷ ಬಿಡುಗಡೆ ಮಾಡಿದೆವು. ಇನ್ನು 4ಕೋಟಿ ರೂಗಳಷ್ಟು ಹಣವನ್ನು ನಾವು ಕೊಡಬೇಕಾಗಿದೆ. 1997-98ನೇ ಸಾಲಿನಲ್ಲಿ ಬಾಕಿ ಉಳಿದಂತಹ 2.42ಲಕ್ಷ ರೂಗಳು 1998-99ನೇ ಸಾಲಿನಲ್ಲಿ 21/2 ಕೋಟಿ ರೂಗಳಷ್ಟು ಹಣ ಬಿಡುಗಡೆ ಮಾಡಲಿಕ್ಕೆ ಈಗಾಗಲೇ ಹಣಕಾಸಿನ ಇಲಾಖೆಯವರಿಗೆ ಪತ್ರವನ್ನು ಬರೆದಿದ್ದೇವೆ. ಈ ಬಡ್ಜೆಟ್ ಅಧಿವೇಶನ ಮುಗಿದ ತಕ್ಷಣ ರಿಬೇಟ್ ಹಣವನ್ನು ಬಿಡುಗಡೆ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆ

251 (1610)

ಶ್ರೀ ಯು.ಆರ್.ಸಭಾಪತಿ, (ಉಡುಪಿ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ತೆರೆಯಲಾಗುವುದೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಈಗಾಗಲೇ ಸ್ಥಾಪಿಸಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ:ವಾಕೈ 200 ಕೈಸೇವಿ 97,ದಿನಾಂಕ :17-2-1999ರಲ್ಲಿ ಉಡುಪಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಗೆ ಆದೇಶ ನೀಡಲಾಗಿದೆ. ಸದರಿ ಆದೇಶದಲ್ಲಿ ಉಡುಪಿ ಜಿಲ್ಲೆಯೂ ಸೇರಿದಂತೆ ಹೊಸದಾಗಿ ಸ್ಥಾಪನೆಗೊಂಡ 7 ಜಿಲ್ಲೆಗಳಿಗೆ ಬೇರೆ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಮತ್ತು ಜಿಲ್ಲಾ ಪಂಚಾಯತ್‌ಗಳಿಂದ ಉಪ ನಿರ್ದೇಶಕರು, ಶ್ರೇಫ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು ಮತ್ತು ಗ್ರೂ ಪ್-ಡಿ ಹುದ್ದೆಗಳನ್ನು ಸ್ಥಳಾಂತರಿಸಿ ಆದೇಶಿಸಲಾಗಿದೆ. ಆದರಂತೆ ಈಗಾಗಲೇ ಉಡುಪಿ ಜಿಲ್ಲಾ ಕೈಗಾರಿಕಾ ಕೇಂದ್ರವು ಅಸ್ತಿತ್ವಕ್ಕೆ ಬಂದಿದ್ದು ಕಾರ್ಯ ನಿರ್ವಹಿಸುತ್ತಿರುವುದು.

ಶ್ರೀ ಯು.ಆರ್. ಸಭಾಪತಿ :- ಸನ್ಮಾನ್ಯ ಉಪಾಧ್ಯಕ್ಷರೆ, ದಿನಾಂಕ :17-2-99ರಲ್ಲಿ ಉಡುಪಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಗೆ ಆದೇಶ ಮಾಡಿದ್ದಾರೆಂದು ಹೇಳಿದ್ದಾರೆ. ಈ ಕಛೇರಿಯು 15 ದಿವಸಗಳ ಹಿಂದೆ ಓಪನ್ ಆಗಿದೆ. ಅಲ್ಲಿ ಕಛೇರಿನೂ ಇಲ್ಲ, ಫೋನ್, ಪೀಠೋಪಕರಣಗಳು, ವಾಹನ ಗಳು ಏನೂ ಇಲ್ಲ. ಅಲ್ಲಿಗೆ ಒಬ್ಬ ಉಪನಿರ್ದೇಶಕರು ಬಂದು ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ನಿಮ್ಮ ಆದೇಶದ ಪ್ರಕಾರ ಒಬ್ಬ ಇಂಡಸ್ಟ್ರೀಯಲ್ ಪ್ರಮೋಷನ್ ಆಫೀಸರ್, ಒಬ್ಬ ಶ್ರೇಫ್ರುಲಿಪಿಗಾರ, ದ್ವಿತೀಯ ದರ್ಜೆ ಸಹಾಯಕ, ಇಬ್ಬರು ಗ್ರೂ ಫ್- ಡಿಯವರ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ. ಉಡುಪಿ ಜಿಲ್ಲೆಯಾಗಿ ಸುಮಾರು ಎರಡು ವರ್ಷಗಳಾಯಿತು. ನಿಮ್ಮ ಆದೇಶ ಬಂದು ಸುಮಾರು 4ತಿಂಗಳಾಯಿತು. ಈಗ 8 ದಿವಸಗಳ ಹಿಂದೆ ಉಪನಿರ್ದೇಶಕರು ಬಂದು ಕುಳಿತುಕೊಂಡರೆ ನಾವು ಏನು ಮಾಡುವುದಕ್ಕೆ ಆಗುತ್ತದೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು 3 ತಾಲ್ಲೂಕ್‌ಗಳಿದ್ದು ಸುಮಾರು 419 ನೊಂದಾಯಿತ ಸಣ್ಣ ಕೈಗಾರಿಕೆಗಳು ಇವೆ. ಇಷ್ಟನ್ನು ಅವರಿಂದ ಕ್ಯಾರಿಔಟ್ ಮಾಡುವುದಕ್ಕೆ ಸಾಧ್ಯವೇ? ಉಳಿದ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ?ನಮಗೆ ಪ್ರತ್ಯೇಕವಾದಂತಹ ಕಛೇರಿಯನ್ನು ಯಾವಾಗ ಕೊಡುತ್ತೀರಿ ಎನ್ನುವ ಬಗ್ಗೆ ದಯವಿಟ್ಟು ತಿಳಿಸುತ್ತೀರಾ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ :- ನಾನು ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಎಲ್ಲಾ ಹೊಸ ಜಿಲ್ಲೆಗಳಿಗೆ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಆದೇಶವನ್ನು ಹೊರಡಿಸಿದ್ದೇನೆ. ದಿನಾಂಕ :17-2-99ರಲ್ಲಿ ಉಡುಪಿಯಲ್ಲಿ, ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಗೆ ಆದೇಶವನ್ನು ಕೊಡಲಾಗಿದೆ. ತಾವು ಪೂರ್ಣಪ್ರಮಾಣ ಕೈಗಾರಿಕೆಯ ಬಗ್ಗೆ ಕೇಳುತ್ತಿದ್ದೀರಿ. ಪೂರ್ಣ ಪ್ರಮಾಣದ ಹಾಗೂ ಸಣ್ಣಪ್ರಮಾಣದ ಕೈಗಾರಿಕೆಗಳು ಬರಬೇಕಾದರೆ ಜಿಲ್ಲಾ ಕೈಗಾರಿಕಾ ಕೇಂದ್ರವಾಗಬೇಕು. ಜಿಲ್ಲಾ ಖಾದಿ ಕಛೇರಿ ಆಗಬೇಕಾದಂಥದ್ದು ಎಂಬ ಉದ್ದೇಶವನ್ನು ಇಟ್ಟುಕೊಂಡು ಆದಷ್ಟು ಬೇಗ ಹೊಸ ಜಿಲ್ಲೆಗಳಿಗೆ ಈಗಾಗಲೇ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೂ, ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೂ ಹೊಸದಾಗಿ ಮಂಜೂರಾತಿಯನ್ನು ಕೊಟ್ಟು ಬೇಗನೆ ಪ್ರಾರಂಭ ಮಾಡಲಿಕ್ಕೆ ಪ್ರಯತ್ನವನ್ನು ಮಾಡಲಾಗಿದೆ. ಉಡುಪಿಯೂ ಸಹ ದೊಡ್ಡ ಜಿಲ್ಲೆಯಾಗಿದೆ. ಹಾಗೂ ಈ ರಾಜ್ಯದಲ್ಲಿ ಇದೂ ಸಹ ಒಂದು ಐತಿಹಾಸಿಕವಾದಂಥ ಸ್ಥಳವಾಗಿದೆ.

12-10 ಪಿ.ಎಂ

ಉಡುಪಿ ಜಿಲ್ಲೆಯಲ್ಲಿ ಹೆಚ್ಚಿನ ಕೈಗಾರಿಕೆಗಳು ಬರಬೇಕೆಂದು ಹೇಳಿ ಕಛೇರಿಯನ್ನು ತೆರೆದು ಅಲ್ಲಿಗೆ ಒಬ್ಬರು ಡೆಪ್ಯುಟಿ ಡೈರೆಕ್ಟರ್, ಶ್ರೇಫ್ರುಲಿಪಿಗಾರ, ಟೈಪಿಸ್ಟ್, ಡಿ ಗ್ರೂಪ್ ನೌಕರರನ್ನು ನೇಮಕ ಮಾಡಲಾಗಿದೆ. ಹೊಸದಾಗಿ ಬಂದಂತಹ ಕಛೇರಿಗಳಲ್ಲಿ ಸ್ವಲ್ಪ ತೊಂದರೆಗಳಿರುತ್ತವೆ. ಹಿಂದಿನ ಅಧಿವೇಶನದಲ್ಲಿ ಸಹ ತಾವು ಮನವಿ ಮಾಡಿದ್ದೀರಿ. ಆದಷ್ಟು ಶ್ರೀಘ್ರವಾಗಿ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸೂಚನೆ ಕೊಡುತ್ತೇನೆ. ಎಷ್ಟೆಷ್ಟು ಹುದ್ದೆಗಳನ್ನು ನೇಮಕ ಮಾಡಲಿಕ್ಕೆ ಕಾರ್ಯಕ್ರಮ ಇದೆಯೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು. ಆರ್. ಸಭಾಪತಿ : ನಾನು ಕೇಳುವುದು ಹುದ್ದೆಗಳನ್ನು ಭರ್ತಿ ಮಾಡುತ್ತೀರಾ ?ಅದನ್ನು ಯಾವಾಗ ಮಾಡುತ್ತೀರಿ ? ನೀವೇ ಮಂಜೂರಾತಿಯನ್ನು ಕೊಟ್ಟಂತಹ ಹುದ್ದೆಗಳಿವೆ. ಸೆಕೆಂಡ್ ಡಿವಿಜನ್ ಕ್ಲಾರ್ಕ್, ಸ್ಟೆನೋ, ಟೈಪಿಸ್ಟ್, ಇಂಡಸ್ಟ್ರೀಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಹುದ್ದೆಗಳನ್ನು ಒಂದು ವಾರದೊಳಗೆ ಭರ್ತಿ ಮಾಡುತ್ತೇವೆಂದು ಒಂದು ನಿಗದಿಯಾದ ದಿನವನ್ನು ಹೇಳಿದರೆ ಒಳ್ಳೆಯದು.

ಶ್ರೀ ಬಸವರಾಜ್‌ಪಾಟೀಲ್ ಅಟ್ಟೂರು: ತಮ್ಮ ಗಮನಕ್ಕೆ ತರಬೇಕಾದರೆ, ಈಗಾಗಲೇ ಡೆಪ್ಯುಟಿ ಡೈರೆಕ್ಟರ್ ಮತ್ತು ಗ್ರೂಪ್ ಡಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಮಾನ್ಯಸದಸ್ಯರು ಹೇಳಿದ ಕೈಗಾರಿಕಾ

ವಿಸ್ತರಣಾ ಅಧಿಕಾರಿಗಳ ಹುದ್ದೆಯನ್ನೂ ಸಹ ಭರ್ತಿ ಮಾಡಿದ್ದೇವೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿಗಳು.

252(1693)

ಶ್ರೀ.ಡಿ.ಆರ್. ಪಾಟೀಲ್(ಗದಗ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದ ಕೊಳವೆಬಾವಿಗಳ ಸಂಖ್ಯೆ ಎಷ್ಟು, ವರ್ಷವಾರು ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡಿರಿ.

ಆ) ಎಷ್ಟು ಕೊಳವೆಬಾವಿಗಳಿಂದ ನೀರೆತ್ತಲಾಗುತ್ತಿದೆ, ಎಷ್ಟು ಕೊಳವೆಬಾವಿಗಳಿಂದ ನೀರೆತ್ತಲಾಗುತ್ತಿಲ್ಲ, ವರ್ಷವಾರು ವಿಧಾನ ಸಭಾ ಕ್ಷೇತ್ರವಾರು ವಿವರ ನೀಡಿರಿ.

ಇ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈ ವರೆಗೆ ಎಷ್ಟು ಭೂಮಿಯನ್ನು ನೀರಾವರಿಗೊಳಿಸಲಾಗಿದೆ.

ಈ) ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳಿಗೆಲ್ಲಾ ನೀರೆತ್ತಲು ವ್ಯವಸ್ಥೆ ಮಾಡಿದರೆ ಎಷ್ಟು ಭೂಮಿಗೆ ನೀರು ಒದಗಿಸಬಹುದಾಗಿದೆ.

ಉ) ಕೊರೆದ ಕೊಳವೆಬಾವಿಗಳಿಂದ ನೀರೆತ್ತಲು ಸೌಲಭ್ಯಗಳನ್ನು ನೀಡದಿರುವುದರಿಂದ ರೈತರಿಗೆ ಆಗಿರಬಹುದಾದ ಅಂದಾಜು ಹಾನಿ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿ ಒಟ್ಟು ಯಶಸ್ವಿ 9646 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

1995 - 96	714
1996 - 97	4289
1997 - 98	4643

ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಒಟ್ಟು ಯಶಸ್ವಿ ಕೊಳವೆಬಾವಿಗಳ ಪೈಕಿ 5598 ಕೊಳವೆಬಾವಿಗಳು ವಿದ್ಯುದ್ದೀಕರಣಗೊಂಡಿವೆ. ವಿದ್ಯುದ್ದೀಕರಣಗೊಂಡ 5598 ಕೊಳವೆಬಾವಿಗಳ ಪೈಕಿ 75 ಕೊಳವೆಬಾವಿಗಳು ದುರಸ್ತಿಗೆ ಒಳಪಟ್ಟಿದ್ದು ನೀರನ್ನು ಎತ್ತುತ್ತಿಲ್ಲ. ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿದೆ.

ಇ) ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುದ್ದೀಕರಣವಾದ ಬಾವಿಗಳು ಹಾಗೂ ಏತ ನೀರಾವರಿಯಿಂದ 30,175-30ಎಕರೆ ಜಮೀನು ನೀರಾವರಿ ಮಾಡಲಾಗಿದೆ.

ಈ) ಮೇಲೆ ತಿಳಿಸಿದ 30,175-30 ಎಕರೆ ಜಮೀನು ಸೇರಿ ಒಟ್ಟು 56095.02ಎಕರೆ ಜಮೀನು ನೀರಾವರಿಯಾಗುತ್ತದೆ. (ಏತನೀರಾವರಿ ಘಟಕಗಳೂ ಸೇರಿ).

ಉ) ಈ ಯೋಜನೆಯನ್ನು ಶೇಖಡ 100ರ ಸಹಾಯಧನದ ರೂಪದಲ್ಲಿ ಅನುಷ್ಠಾನ ಗೊಳಿಸುತ್ತಿರುವುದರಿಂದ ಫಲಾನುಭವಿಗಳಿಗೆ ಯಾವುದೇ ಹಾನಿ ಆಗಿರುವುದಿಲ್ಲ.